

ಸತ್ಯಾನಂದ ಪಾತ್ರೋಟ
ಕಲೆ: ರೂಪಶ್ರೀ ಕಲ್ಲಿಗನೂರು

# ಬದುಕಬಾರದೇ ನಾವು ಹೀಗೆ

ಮಳೆ,
ಬರುತ್ತಲೇ ಇದೆ
ತನ್ನಷ್ಟಕ್ಕೆ ತಾನೆ
ಗುಡುಗು, ಸಿಡಿಲು, ಮಿಂಚಿನ
ಆರ್ಭಟದಲಿ ಒಮ್ಮೆ ಜೋರಾಗಿ
ಇನ್ನೊಮ್ಮೆ ತುಂತುರುವಾಗಿ
ಬೀಳುತ್ತಲೇ ಇದೆ
ಇಳೆಯ ಮೇಲೆ
ತುಂಬಿ ಹರಿಯುತ್ತವೆ
ನದಿ, ಹಳ್ಳ, ಕೊಳ್ಳ
ನೋಡಬೇಕಾಗ ಜೀವ ಜಲದ ಭಾವ



ಇಳೆ,
ಅರಳುತ್ತಲೇ ಇದೆ
ಹಸನಾಗಿ, ಹಸಿರಾಗಿ, ಹೂವಾಗಿ
ತೀಡುತ್ತಲೇ ಇದೆ ಗಂಧವಾಗಿ
ಹಸಿದವರ ಒಡಲಿಗೆ ಅನ್ನವಾಗಿ

ಇದ ಕಂಡ
ಸೂರ್ಯ
ಚಕ್ಕಂದದಲಿ ನಲಿಯುತ್ತಾನೆ
ಮೋಡದ ಮರೆಯಲಿ
ತಾಯಿಯ ಒಡಲ ಮಗುವಿನಂತೆ
ಇಳೆಯ ಸೆರಗಿನಲಿ
ಬೆಳಕು ಚೆಲ್ಲುತ್ತಾನೆ ಆಗಾಗ
ರೈತನ, ಶ್ರಮಿಕನ ಮುಖದಲಿ
ಇದ ನೋಡ ನೋಡುತ್ತಲೇ
ಎಲ್ಲೆಡೆ ಹಕ್ಕಿಗಳ ಚಿಲಿಪಿಲಿ ಗಾನ
ಪ್ರಾಣಿಗಳ ಕುಣಿದಾಟ, ನೆಗೆದಾಟ
ಎಂಥ ಚೆಲುವದು
ಹೋದ ಜೀವ ಮತ್ತೆ ಬಂದಂತೆ ಭಾಸ

ನೋಡಿ ಬದುಕಬಾರದೇ
ನಾವು ಹೀಗೆ
ಮಳೆಯಂತೆ, ಇಳೆಯಂತೆ
ಸೂರ್ಯನಂತೆ
ಸುಳಿದಾಡುವ ಸುಳಿ ಗಾಳಿಯಂತೆ
ಮರದೊಡಲ ಕಿಚ್ಚಿನಂತೆ
ಶೂನ್ಯದಲಿ ಬೆಳೆ ಬೆಳೆದು
ಬಟಾಬಯಲಾದ ಶರಣರಂತೆ

ಬದುಕಬಾರದೇ ನಾವು ಹೀಗೆ